*ಆರ್.ವಿ. ಹಿರೇಮಠ, ಕೆಲಗೇರಿ*
*ಹೆಣ್ಣು ತಾಳಿ ಕಟ್ಟಿಸಿಕೊಂಡರೆ ಮುತ್ತೈದೆ; ಗಂಡು ಕಟ್ಟಿಸಿಕೊಂಡರೆ?*



ಪ್ರಗತಿಪರ ತೆಪರ!

*ವಿ. ಹಮೀದ್, ವಿಟ್ಲ*
*ವಿವಾಹಿತೆಯ ಸ್ಪರ್ಶಕ್ಕೂ ಅವಿವಾಹಿತೆಯ ಸ್ಪರ್ಶಕ್ಕೂ ಏನು ವ್ಯತ್ಯಾಸ?*
ಒಂದರಿಂದ ಹರ್ಷಣ, ಮತ್ತೊಂದರಿಂದ ಘರ್ಷಣೆ!

*ಕೆ. ಮೈಥಿಲಿಕೃಷ್ಣ, ಬೆಂಗಳೂರು*
*ಪುಢಾರಿ ಎಂದರೇನು?*
ಪುರಹಿತವನ್ನು ಧಾಣಾಡಂಗೂರವಾಗಿ ರಿಕ್ತವಾಗಿಸುವ ಭೀಕರ ಪ್ರಾಣಿ.

*ಪಿ.ಎಸ್. ಶ್ರೀವತ್ಸ, ಬೆಂಗಳೂರು*
*ಕೆಲವರಿಗೆ ಸುಲಭದಲ್ಲೇ ಮದುವೆಯಾಗಿಬಿಡುವುದರ ಕಾರಣ?*
ಜನ್ಮಸ್ಥಾನದಲ್ಲೇ ಶನಿ ಇರುತ್ತಾನಂತೆ!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಮೊದಲರಾತ್ರಿ ಹೆಂಡತಿ ಗಂಡನಿಗೆ ಹಾಲೇ ಏಕೆ ಕೊಡಬೇಕು?*



ಇಟ್ಟಿರುವ ಚಕ್ಕುಲಿ, ಮುಚ್ಚೋರೆಗಳನ್ನು ಮೆತ್ತಗಾಗಿಸುವುದಕ್ಕಾಗಿ ನೆನೆಹಾಕಲು!

*ಖಲಂದರ್ ಅಝೀರುಝ್ ಜಾವಗಲ್, ಮಂಗಳೂರು*
*ನಮ್ಮಲ್ಲಿ ಸಾಧಕರ ಸಂಖ್ಯೆ ಕಡಿಮೆಯಲ್ಲವೆ?*
ಸಾಧಕರ ಸಂಖ್ಯೆ ವಿರಳ, ಆದರೆ ಸಮಯಸಾಧಕರ ಸಂಖ್ಯೆ ವಿಪುಲ.

*ಎಚ್. ಆನಂದ್ ಕುಮಾರ್, ಚಿತ್ರದುರ್ಗ*
*ನಿಮ್ಮ ಉತ್ತರಗಳ ಉತ್ಸಾಹಕ್ಕೆ ಯಾವ ಪುಸ್ತಕ ಪ್ರೇರಣೆ ತಿಳಿಸುವಿರಾ?*
ಪುಸ್ತಕವಲ್ಲ. ವ್ಯಕ್ತಿ! ಮಾಸ್ಟರ್ ಹಿರಣ್ಣಯ್ಯನವರು!

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಹೆಣ್ಣಿಗೂ, ಕನ್ನಡಿಗೂ ಏನು ವ್ಯತ್ಯಾಸ?*
ಹೆಣ್ಣಿಗೆ ಬೇಕಾದ್ದು ಅರಸ, ಕನ್ನಡಿಗೆ ಪಾದರಸ!

*ನಾರಾಯಣ, ಗುಗ್ಗರಹಟ್ಟಿ*
*ಸ್ನೇಹಿತನೊಬ್ಬ ಆಸ್ಪತ್ರೆಯಲ್ಲಿದ್ದಾನೆ, ಮಾತನಾಡಿಸೋಣವೆಂದರೆ ಹಣ ಕೇಳುವನೆಂಬ ಅನುಮಾನ... ಏನು ಮಾಡಲಿ?*
ಕೋಮಾಗೆ ಹೋಗುವವರೆಗೆ ಕಾದು ನೋಡಿಕೊಂಡು ಬನ್ನಿ ಹೈ ಕ್ಲಾಸ್ ಗೆಳೆಯರೆ!

*ಕುಬೇರಪ್ಪ ಎಂ. ವಿಭೂತಿ, ಹರಿಹರ*
*ಅಪ್ಪನನ್ನು ಕಡೆಗಾಣಿಸಿ ಅಯ್ಯಪ್ಪನನ್ನು ಅಪ್ಪ ಎಂದು ಪೂಜಿಸುವರಲ್ಲಾ..?*
ಪಿತೃಪಕ್ಷದಲ್ಲಿ ಮಾತ್ರ ಪಿತೃವನ್ನು ನೆನೆಸಿಕೊಳ್ಳುವವರಿಗೆ ಅಪ್ಪ ಬೆಪ್ಪ, ಅಯ್ಯಪ್ಪ ಅಪ್ಪ; ಅಯ್ಯಯ್ಯಪ್ಪ!

*ಬಿಂಡಿಗನವಿಲೆ ರಂಗರಾಜು, ಬೆಂಗಳೂರು*
*ಮನುಷ್ಯನಿಗೆ ಮರೆವು ಅನ್ನುವುದು ಇಲ್ಲದಿದ್ದರೆ ಏನಾಗುತ್ತಿತ್ತು?*
ಹೇಳಿದ ಜೋಕ್‌ಗಳನ್ನೇ ಹೇಳುವವರ ಮಾತುಗಳನ್ನು ಕೇಳುವುದು ಕಷ್ಟವಾಗುತ್ತಿತ್ತು!

*ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ*
*ಎರಡನೆಯ ಹೆಂಡತಿ ಸಮಸ್ಯೆಯಾಗುವುದೇಕೆ?*
ದೈವನಿಯಮ; ಶಿವನ ಎರಡನೆಯ ಹೆಂಡತಿಯೂ ತಲೆಯ ಮೇಲೆ ಕುಳಿತಿರುವುದೇ ಇದಕ್ಕೆ ಪ್ರೇರಣೆ!

*ಕೆ. ಚಂದ್ರಶೇಖರ ಕೋಣನಕುಂಟೆ, ಬೆಂಗಳೂರು*
*ದೇವೇಗೌಡರ ಗಾಯನ, ಯಡ್ಡಿಯ ಪಿಟೀಲು, ಕುಮಾರಣ್ಣನ ತಬಲಾ, ದತ್ತರ ಮೃದಂಗ, ಸಿದ್ದುವಿನ ಖಂಜರಾ... ಹೇಗಿರುತ್ತೆ ಕರ್ನಾಟಕ ಸಂಗೀತ ಕಚೇರಿ?*
ಕೋಣವೂ ಉರುಳುರುಳಿ ಅಳುತ್ತಾ, ಕಿವಿಗೆ ಹತ್ತಿ ಬೇಡುತ್ತದೆ!

*ಎಸ್.ಆರ್. ದೇಸಾಯಿ, ರಾಯಚೂರು*
*ಲಗ್ನಕ್ಕೆ ಗುಣಗಳನ್ನು ತಾಳೆ ನೋಡುವಾಗ ಒಂದುವೇಳೆ ಇಬ್ಬರದೂ ಕೆಟ್ಟಗುಣವಿದ್ದರೆ ಮ್ಯಾಚ್ ಆಗುತ್ತದೆಯೆ?*
ಓಹೋ! ಜಯಲಲಿತಾ-ಕರುಣಾನಿಧಿಯಂತಹ ಜೋಡಿಯಾಗುತ್ತದೆ!

## ಬಹುಮಾನಿತ ಪ್ರಶ್ನೆ

*ಎನ್. ಪ್ರಕಾಶ, ದೇವನಹಳ್ಳಿ*
*ಕತ್ತೆಯ ಬೆಲೆ ಭಾರ ಹೊರುವತನಕ, ಕುದುರೆಯ ಬೆಲೆ ಓಡುವತನಕ, ಮನುಷ್ಯನ ಬೆಲೆ ಎಲ್ಲಿಯತನಕ?*
ಮನುಷ್ಯನ ರೀಟೈಲ್ ಐಟಂಗಳಾದ ಕಣ್ಣು, ಕಿಡ್ನಿ, ರಕ್ತ, ಇತ್ಯಾದಿಗಳಿಗೆ ಬೆಲೆ ಇದೆ, ಹೋಲ್ ಸೇಲ್ ಆಗಿ ಮನುಷ್ಯನಿಗೆ ಬೆಲೆ ಇಲ್ಲ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ದೊಡ್ಡ ಸ್ಥಾನಕ್ಕೆ ಏರಿದವರನ್ನು ನೋಡಿ ಕರುಬುವವರಿಗೆ ನಿಮ್ಮ ಸಲಹೆ?*
ಬೊಜ್ಜು ಕರಗಿಸಿಕೊಳ್ಳಿ, ನೀವೂ ಏರಬಹುದು!

*'ವೀಂದ್ರನಾಥ ಶಿ. ಯಡಹಳ್ಳಿ, ಬಿಳಗಿ*
*ಮಕ್ಕಳ ರಂಪಾಟಕ್ಕೂ, ರಾಜಕಾರಣಿಗಳ ರಂಪಾಟಕ್ಕೂ ಇರುವ ವ್ಯತ್ಯಾಸವೇನು ಗುರು?*
ಮಕ್ಕಳದು ಮನೆಯಲ್ಲಿ ರಂಪ, ಶಾಲೆಯಲ್ಲಿ ನಿದ್ರೆ; ರಾಜಕಾರಣಿಗಳದು ಹಾದಿಯಲಿ ರ್ಲಂಪ, ಸದನದಲ್ಲಿ ನಿದ್ರೆ!

*ಅಮರಯ್ಯ ಪತ್ರಿಮಠ, ಶೋರಾಪುರ*
*ಸಂಸಾರದಲ್ಲಿ ಸ-ರಿ-ಗ-ಮದ ಘಮಘಮ ಪಸರಿಸಬೇಕಾದರೆ...?*
ಸೆಂಟ್ ಹಚ್ಚಿಕೊಂಡು ಸಂಗೀತ ಹಾಡುವವಳನ್ನು ಮದುವೆಯಾಗಬೇಕು!

*ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ*
*ಶ್ರೀಮತಿ ಮತ್ತು ಪ್ರೇಯಸಿ ಒಬ್ಬರಿಗೊಬ್ಬರು ಪರಿಚಿತರಾಗಿದ್ದರೆ ಒಳ್ಳೆಯದೋ, ಅಪರಿಚಿತರಾಗಿದ್ದರೆ ಒಳ್ಳೆಯದೋ?*
ನನಗೂ ತಿಳಿಯದು! ಕುಮಾರಣ್ಣನನ್ನು ಕೇಳಿ ಹೇಳುತ್ತೇನೆ!

*ರಮೇಶ ಜಿ. ಬೊಂಗಾಳೆ, ಬೈಲಹೊಂಗಲ*
*ಗಗನಕ್ಕೇರಿದ ಬೆಲೆಗಳು ಭೂಮಿಗೆ ಇಳಿಯುವುದು ಯಾವಾಗ ಸಾರ್?*



ಭೂಮಿಯೇ ಗಗನದ ಮಟ್ಟಕ್ಕೇರಿದಾಗ!